ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಾಕ್ಷಿಯ ಹೆಸರು :- ಕೆ ಎಂ ಮಂಜುಳ

ತಂದೆ/ ಗಂಡನ ಹೆಸರು :- ಪುಟ್ಟಮಾದಪ್ಪ

ವಯಸ್ಸು :- 51 ವರ್ಷ

ಉದ್ಯೋಗ :- ಅಬಕಾರಿ ನಿರೀಕ್ಷಕರು

ವಾಸಸ್ಥಳ :- ಚನ್ನಪಟ್ಟಣ

(ಸಾಕ್ಷಿಗೆ ದಿನಾಂಕಃ 15-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನಾನು ದಿ 15-01-2021 ರಿಂದ ದಿ 27-12-2022 ರವರೆಗೂ ಮಂಡ್ಯ ಉಪವಿಭಾಗ ವಲಯದ ಅಬಕಾರಿ ಉಪ ಅಧಿಕಾರ ಕಚೇರಿ, ಮಂಡ್ಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ 07-09-2021 ರಂದು ಬೆಳಿಗ್ಗೆ 11-20 ಗಂಟೆ ಸಮಯದಲ್ಲಿ ಮದ್ದೂರು, ಶಿವಪುರ ಟೌನ್ ಹಳೆ ಕೊಪ್ಪ ರಸ್ತೆಯ ಬಳಿಯಲ್ಲಿರುವ ಗಾಂಧಿ ಸರ್ಕಲ್ ಬಳಿ ನಾನು ಚಾಸಾ-2, 3 ರವರೊಂದಿಗೆ ಸರ್ಕಾರಿ ವಾಹನ ನಂ.ಕೆಎ-11-ಜಿ-515 ರಲ್ಲಿ ಗಸ್ತು ನಡೆಸುತ್ತಿದ್ದಾಗ, ಶಿವಪುರ ಕಡೆಯಿಂದ ಚಾಮನಹಳ್ಳಿ ಕಡೆಗೆ ಒಬ್ಬ ಅಸಾಮಿಯು ಒಂದು ದ್ವಿಚಕ್ರ ವಾಹನದಲ್ಲಿ ಪ್ಲಾಸ್ಟಿಕ್ ಚೀಲದ ಗಂಟನ್ನು ಇಟ್ಟುಕೊಂಡು ಬರುತ್ತಿದ್ದು, ದೂರದಿಂದಲೇ ಇಲಾಖಾ ವಾಹನ ಮತ್ತು ಸಮವಸ್ತ್ರಧಾರಿಯಾದ ನಮ್ಮಗಳನ್ನು ಕಂಡು, ವಾಹನ ಮತ್ತು ಪ್ಲಾಸ್ಟಿಕ್ ಚೀಲದ ಗಂಟನ್ನು ಬೀಳಿಸಿ ಓಡಿ ಹೋಗಿರುತ್ತಾರೆ. ನಂತರ ನಾವುಗಳು ಹಿಡಿಯಲು ಪ್ರಯತ್ನಿಸಿದ್ದು ಸಿಕ್ಕಿರುವುದಿಲ್ಲ. ನಂತರ ವಾಹನದ ಹತ್ತಿರ ಬಂದು, ಅಲ್ಲಿಯೇ ಇದ್ದ ಸ್ಥಳೀಯರನ್ನು ಶೋಧನಾ ಕಾಲದಲ್ಲಿ ಪಂಚರಾಗಿ ಸಹಕರಿಸಲು ಕೋರಿದ್ದು, ಸದರಿಯವರು ನಿರಾಕರಿಸಿದ್ದು, ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲ ಕಾರಣ ನಿಯಮದಡಿಯಲ್ಲಿ ನಾನು ಶೋಧನಾ ವಾರೆಂಟ್ ನ್ನು ತಯಾರಿಸಿರುತ್ತೇನೆ. ಸದರಿ ಶೋಧನಾ ವಾರೆಂಟ್ ನ್ನು ನಿಪಿ-3 ಎಂದು, ಸಾಕ್ಷಿಯ ಸಹಿ ನಿಪಿ-3 ಎ ಎಂದು ಗುರುತಿಸಲಾಯಿತು. ಸದರಿ ನಿಂತಿದ್ದ ಗಾಡಿಯು ಕೆಎ-04-ಇಎಫ್-2304 ಆಗಿದ್ದು, ಪ್ಲಾಸ್ಟಿಕ್ ಚೀಲವನ್ನು ತೆರೆದು ನೋಡಲಾಗಿ ಸದರಿಯಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ್ ಚಿಯರ್ಸ್ ವಿಸ್ಕಿಯ 96 ಟೆಟ್ರಾ ಪ್ಯಾಕ್ ಗಳು, ಮತ್ತೊಂದು ರಟ್ಟಿನ ಪೇಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ್ ಚಿಯರ್ಸ್ ವಿಸ್ಕಿಯ 48 ಟೆಟ್ರಾ ಪ್ಯಾಕ್ ಗಳು, ಮತ್ತು 180 ಬ್ಯಾಕ್ ಪೈಪರ್ ವಿಸ್ಕಿಯ 15 ಟೆಟ್ರಾ ಪ್ಯಾಕ್ ಗಳು, ಹಾಗೂ 330 ಮಿಲಿಯ ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ ನ 10 ಟಿನ್ ಗಳು ಇದ್ದವು. ಸದರಿ ಮಧ್ಯವನ್ನು ನಿಪಿ-2 ರಂತೆ ಚಾಸಾ-3 ರವರು ನನ್ನ ಸಮಕ್ಷಮ ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ನ್ನು ಬೆಳಗ್ಗೆ 11.20 ರಿಂದ ಮಧ್ಯಾಹ್ನ 1.00 ಗಂಟೆಯವರೆಗೂ ಮಾಡಿರುತ್ತೇವೆ. ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು.

ಅವುಗಳಲ್ಲಿ ಕ್ರಮ ಸಂಖ್ಯೆ 1 ರಿಂದ 90 ಮಿಲಿಯ 10 ಟೆಟ್ರಾ ಪ್ಯಾಕ್ ಮತ್ತು ಕ್ರಮ ಸಂಖ್ಯೆ 2 ರಿಂದ 90 ಮಿಲಿಯ 10 ಟೆಟ್ರಾ ಪ್ಯಾಕ್ ಗಳು, ಬ್ಯಾಕ್ ಪೈಪರ್ ವಿಸ್ಕಿಯ 180 ಮಿಲಿಯ 5 ಟೆಟ್ರಾ ಪ್ಯಾಕ್ ಗಳು ಹಾಗೂ 330 ಮಿಲಿಯ ಕಿಂಗ್ ಫಿಶರ್ ಸ್ಟ್ರಾಂಗ್ 2 ಟಿನ್ ಗಳನ್ನು ರಾಸಾಯನಿಕ ಪರೀಕ್ಷಾ ವರದಿಗಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಒಲೆದು ಅರಗಿನಿಂದ ಸೀಲ್ ಮಾಡಿರುತ್ತೇವೆ ಮತ್ತು ನಿಪಿ-1 ರಂತೆ ಮಾದರಿ ಸೀಲ್ ನಕಲನ್ನು ತಯಾರಿಸಿರುತ್ತೇವೆ. ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

ಮುಂದಿನ ಕ್ರಮಕ್ಕಾಗಿ ವಿವಾದಿತ ವಾಹನ ಮತ್ತು ಮದ್ಯವನ್ನು ಠಾಣೆಗೆ ತಂದಿರುತ್ತೇವೆ. ಆರೋಪಿಯನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ನಂತರ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ. ಸದರಿ ಪ್ರ.ವ.ವರದಿಯನ್ನುನಿಪಿ-4 ಎಂದು, ಸಾಕ್ಷಿಯ ಸಹಿ ನಿಪಿ-4 ಎ ಎಂದು ಗುರುತಿಸಲಾಯಿತು. ಆ ದಿನ ಓಡಿ ಹೋದ ವ್ಯಕ್ತಿಯನ್ನು ನಾನು ಗುರುತಿಸಲಾರೆ. ಈಗ ನ್ಯಾಯಾಲಯದ ಮುಂದೆಯಿರುವ ಎಂಓ-1 ರಿಂದ 27 ಮದ್ಯವೂ ಆ ದಿನ ಅಮಾನತ್ತುಪಡಿಸಿದ ಮತ್ತು ಎಫ್ ಎಸ್ ಎಲ್ ಗೆ ಕಳುಹಿಸಿದ ಮದ್ಯವಾಗಿದೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-

ಆ ದಿನ ಆಸಾಮಿ ಬಿಟ್ಟು ಹೋದ ಬೈಕ್ ನಂ.ಕೆಎ-04-ಇಎಫ್-3204 ಎಂದರೆ ಸರಿ. ಆ ದಿನ ಓಡಿ ಹೋದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಬಿ ಎನ್ ವಕೀಲರವ ರಿಂದಃ**

ನಾವು ಶಿವಪುರದಿಂದ ಚಾಮನಹಳ್ಳಿ ಕಡೆಗೆ ಗಸ್ತು ಹೋಗುತ್ತಿದ್ದೇವು. ನಾವು ಶಿವಪುರದ ಒಳಗಡೆಯಿಂದ ಚಾಮನಹಳ್ಳಿ ಕಡೆಗೆ ಹೋಗುತ್ತಿದ್ದೇವು. ಶಿವಪುರದ ಒಳಗಡೆಯಿಂದ ಚಾಮನಹಳ್ಳಿಗೆ ಹೋಗಲು ರಸ್ತೆ ಇರುವುದಿಲ್ಲ ಎಂದರೆ ನನಗೆ ಮರೆತು ಹೋಗಿದೆ. ನಾವು ಹೋಗಿದ್ದ ಸ್ಥಳದಲ್ಲಿ ಅಕ್ಕಪಕ್ಕದ ಮನೆಗಳು ಮತ್ತು ಅಂಗಡಿ ಮುಗ್ಗಟ್ಟುಗಳು, ಗ್ಯಾಸ್ ಏಜೆನ್ಸಿ ಇದೆ ಎಂದರೆ ನಾವು ಹೋದಾಗ ಇರಲಿಲ್ಲ ಎನ್ನುತ್ತಾರೆ. ಹೈವೆಯಿಂದ ವಿವಾದಿತ ಸ್ಥಳದ ನಡುಮೆ ಸುಮಾರು ಅರ್ಧ ಮುಕ್ಕಾಲು ಕೀಮೀ ಇದೆ. ರೈಲ್ವೆ ಟ್ರ್ಯಾಕ್ ಆದ ನಂತರ ಚಾಮನಹಳ್ಳಿ ಗ್ರಾಮ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ರೈಲ್ವೆ ಟ್ರ್ಯಾಕ್ ನ ಮುಂಚಿನ ಸ್ಥಳದಲ್ಲಿದ್ದೇವು ಎನ್ನುತ್ತಾರೆ. ನಾವು ಇದ್ದ ಸ್ಥಳವು ರೈಲ್ವೇ ಸ್ಟೇಷನ್ ಎಂದರೆ ಸರಿಯಲ್ಲ.ಸದರಿ ಸ್ಥಳದಲ್ಲಿ ಸಾರ್ವಜನಿಕರು ಓಡಾಡುತ್ತಾರೆಂದರೆ ಸರಿ. ಆಸಾಮಿಯು ಶಿವಪುರದಿಂದ ಚಾಮನಹಳ್ಳಿಗೆ ಹೋಗುತ್ತಿದ್ದರು. ಶಿವಪುರದಿಂದ ಚಾಮನಹಳ್ಳಿಗೆ ಹೋಗಲು ರಸ್ತೆ ಇಲ್ಲದ

ಕಾರಣ ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಧ್ಯದ ಚೀಲದಲ್ಲಿ ಮಧ್ಯದ ತಯಾರಿಕ ದಿನಾಂಕ ಮತ್ತು ಬ್ಯಾಚ್ ನಂಬರ್ ನ್ನು ನಾನು ನೋಡಿಲ್ಲ. ಅದನ್ನು ಪರಿಶೀಲಿಸಿ ಮಹಜರ್ ನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಮೂಮಾ 1 ರಿಂದ 27 ರ ಮಾದರಿ ಹೊರಗಡೆ ಸಿಗುತ್ತದೆ ಎಂದರೆ ಸರಿ. ನಾನು ನನ್ನ ವಿಚಾರಣೆಯಲ್ಲಿ ಹೇಳಿದ್ದಂತಹ ಮಧ್ಯವನ್ನು ವಶಪಡಿಸಿಕೊಂಡಿದ್ದೇವೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದರೊಂದಿಗೆ ಆಸಾಮಿಯ ದ್ವಿಚಕ್ರವನ್ನು ವಶಪಡಿಸಿಕೊಂಡಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಮಹಜರ್ ಮಾಡಿದ್ದಲ್ಲಿ ಸ್ಥಳೀಯರ ಸಹಿ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ್ಥಳೀಯರ ಸಹಕರಿಸಲಿಲ್ಲ ಎನ್ನುತ್ತಾರೆ. ಠಾಣೆಯಲ್ಲಿ ನಾನು ಮತ್ತು ನನ್ನ ಸಿಬ್ಬಂದಿ ಸೇರಿ ಮಹಜರ್ ನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ನಾವು ಗಸ್ತು ಮಾಡುತ್ತಿದ್ದಾಗ ನಮ್ಮಗಳನ್ನು ನೋಡಿ ಬೈಕ್ ಮತ್ತು ರಟ್ಟಿನ ಪೆಟ್ಟಿಗೆಯನ್ನು ಬಿಟ್ಟು ಹೋಗಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಮಾನತ್ತುಪಡಿಸಿದ ಮಧ್ಯದಲ್ಲಿ ರಾಸಾಯನಿಕ ವರದಿಗಾಗಿ ಮಾದರಿ ಮಧ್ಯ ತೆಗೆದು ಸೀಲ್ ಮಾಡಲಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಠಾಣಾ ಅಂಕಿಅಂಶಗಳಿಗಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)
ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ